ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

ಸಂಖ್ಯೆ: ಕವಿಪ್ರನಿನಿ/ಬಿ66/23615/2021-22 ದಿನಾಂಕ : 1 OCT 2021

## ಸುತ್ತೋಲೆ

**ವಿಷಯ:** ಇಲಾಖಾ-ಎಕ್ಸಿಕ್ಯೂಟೀವ್ ಲೋಯರ್ ಪರೀಕ್ಷೆ ನಡೆಸುವ ಬಗ್ಗೆ.

**ಉಲ್ಲೇಖ:**
1. ಕವಿಪ್ರನಿನಿ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ66/2499/2019-20 ದಿನಾಂಕ: 20.03.2020, 02.04.2020, 22.04.2020, 27.04.2020, 22.05.2020.
2. ಕವಿಪ್ರನಿನಿ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/5607(II)/2000-2001 ದಿನಾಂಕ 07.05.2020
3. ಕವಿಪ್ರನಿನಿ ಅಧಿಸೂಚನೆ ಸಂಖ್ಯೆ:ಕವಿಪ್ರನಿನಿ/ಬಿ16/5607(II) / 2000-2001 ದಿನಾಂಕ 30.08.2021
4. ಇಲಾಖಾ ಪರೀಕ್ಷಾ ಮಂಡಳಿಯ ಸಭೆಯ ನಡಾವಳಿ ದಿನಾಂಕ 14.09.2021
5. ಕವಿಪ್ರನಿನಿ ಅಧಿಸೂಚನೆ: ಕವಿಪ್ರನಿನಿ/ಬಿ66/2499/2019-20 ದಿನಾಂಕ:30.09.2021

*******

ಉಲ್ಲೇಖ (1) ರ ದಿನಾಂಕಗಳ ಸುತ್ತೋಲೆಗಳಲ್ಲಿ ಕವಿಪ್ರನಿನಿಯ ಇಲಾಖಾ ಎಕ್ಸಿಕ್ಯೂಟೀವ್ ಲೋಯರ್ ಪರೀಕ್ಷೆಯನ್ನು ನಡೆಸಲು ನಿರ್ಧರಿಸಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಆದರೆ ಆಡಳಿತಾತ್ಮಕ ಕಾರಣಗಳಿಂದಾಗಿ ಉಲ್ಲೇಖ-5 ರ ಅಧಿಸೂಚನೆಯಲ್ಲಿ ಎಕ್ಸಿಕ್ಯೂಟೀವ್ ಲೋಯರ್ ಪರೀಕ್ಷೆಯನ್ನು ರದ್ದುಗೊಳಿಸಲಾಗಿದೆ.

ಉಲ್ಲೇಖ (3) ರ ಕವಿಪ್ರನಿನಿಯ ಅಧಿಸೂಚನೆಯಲ್ಲಿ ನೌಕರಿಭರ್ತಿ ಮತ್ತು ಬಡತಿ ನಿಯಮಗಳು, ನೌಕರರ (ಅರ್ಹತಾ ಪರೀಕ್ಷಣೆ) ನಿಯಮಗಳು ಮತ್ತು ನೌಕರರ(ಜ್ಯೇಷ್ಠತಾ) ನಿಯಮಗಳು ರ ಕ್ರಮ ಸಂಖ್ಯೆ 12(ಬಿ)(i) ರಲ್ಲಿ ತಿದ್ದುಪಡಿಯಾಗಿರುವುದರಿಂದ ಎಕ್ಸಿಕ್ಯೂಟೀವ್ ಲೋಯರ್ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ ನೌಕರರ ಅರ್ಹತೆಯನ್ನು ಈ ಕೆಳಕಂಡಂತೆ ಮಾರ್ಪಡಿಸಲಾಗಿದೆ ಹಾಗೂ ಎಕ್ಸಿಕ್ಯೂಟೀವ್ ಲೋಯರ್ ಪರೀಕ್ಷೆಗಳನ್ನು ನವಂಬರ್-2021 ರಲ್ಲಿ ನಡೆಸಲು ನಿರ್ಧರಿಸಿ ಪರೀಕ್ಷಾ ಅರ್ಜಿಗಳನ್ನು ಅರ್ಹ ನೌಕರರು ಸಲ್ಲಿಸಲು ಹೊಸದಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ. | ಪರೀಕ್ಷೆಯ ಹೆಸರು | ಅರ್ಜಿ ಸಲ್ಲಿಸಲು ಅರ್ಹ ನೌಕರರು |
|---|---|---|
| 1. | ಎಕ್ಸಿಕ್ಯೂಟೀವ್ ಲೋಯರ್<br><br>ನಿಗದಿತ ಶುಲ್ಕ:<br>ರೂ.200/-(ಪರೀಕ್ಷಾ ಶುಲ್ಕ)+ರೂ.36/-(18% ಸರಕು ಮತ್ತು ಸೇವಾ ತೆರಿಗೆ)=ಒಟ್ಟು ರೂ.236/- | ಕರ್ನಾಟಕ ರಾಜ್ಯದ ಪಾಲಿಟೆಕ್ನಿಕ್‌ನಲ್ಲಿ ರೆಗ್ಯೂಲರ್ ಕಾಲೇಜ್ ಮೋಡ್ ನಲ್ಲಿ ಎಲೆಕ್ಟ್ರಿಕಲ್/ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ನಲ್ಲಿ ಡಿಪ್ಲೋಮಾ ವಿದ್ಯಾರ್ಹತೆ ಹೊಂದಿರುವ ಕಿರಿಯ ಇಂಜಿನಿಯರ್ ಹುದ್ದೆಗಿಂತ ಯಾವುದೇ ಪದವೃಂದದ ಕೆಳಮಟ್ಟದ ಹುದ್ದೆಯ ನೌಕರರು<br>ಉದಾ: ಕಾವಲುಗಾರ, ಮಾಲಿ ದರ್ಜೆ-2,ಕಿರಿಯ ಮಾಪಕ ಓದುಗ , ಕಿರಿಯ ಪವರ್ ಮ್ಯಾನ್,ಕಿರಿಯ ಸ್ಟೇಷನ್ ಪರಿಚಾರಕ, ದಫ್ತರಿ, ಕಿರಿಯ ಸಹಾಯಕ, ಸಹಾಯಕ ಇತ್ಯಾದಿ.<br>ಮತ್ತು<br>ದಿನಾಂಕ 22.04.2015 ರಂದು ಅಥವಾ ಇದಕ್ಕಿಂತ ಮುಂಚಿತವಾಗಿ ಎಲೆಕ್ಟ್ರಾನಿಕ್ಸ್ (ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್), ಟೆಲಿಕಮ್ಯೂನಿಕೇಷನ್ ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂಗ್ ನಲ್ಲಿ ಡಿಪ್ಲೋಮಾ ಪಡೆದಂತಹ ಅಭ್ಯರ್ಥಿಗಳನ್ನು ಮತ್ತು ಕವಿಪ್ರನಿನಿ/ಎಸ್ಕಾಂ ಗಳ ಮೂಲಕ ನಿರಾಕ್ಷೇಪಣಾ ಪತ್ರವನ್ನು ಪಡೆದು, ಎ.ಐ.ಸಿ.ಟಿ.ಇ ಮತ್ತು ಕರ್ನಾಟಕ ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಮಾನ್ಯತೆ ಪಡೆದ ಕಾಲೇಜಿನಲ್ಲಿ ಮೇಲ್ಕಂಡ ಡಿಪ್ಲೋಮಾ ವಿದ್ಯಾರ್ಹತೆಯನ್ನು ಪಡೆಯಲು ದಿನಾಂಕ 22.04.2015 ರಂದು ಅಥವಾ ಇದಕ್ಕಿಂತ ಮುಂಚಿತವಾಗಿಯೇ ಪ್ರವೇಶಾತಿ ಹೊಂದಿ ತದನಂತರದಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು<br>ಮತ್ತು<br>ಐ.ಟಿ.ಐ/ ಜೆ.ಒ.ಡಿ.ಸಿ/ ನಕಾಶೆಗಾರಿಕೆಯ ವಿದ್ಯಾರ್ಹತೆ ಆಧಾರದ ಮೇಲೆ ನೇರವಾಗಿ ನಿರ್ವಾಹಕರು/ ಮೇಲ್ವಿಚಾರಕರು/ ಮಾಪಕ ಓದುಗರು/ ನಕಾಶೆಗಾರರು/ಸಹಾಯಕ ನಕಾಶೆಗಾರರು/ಟ್ರೇಸರ್‌ಗಳು/ಸಹಾಯಕ ಉಗ್ರಾಣ ಪಾಲಕರಾಗಿ ನೇಮಕಾತಿ ಹೊಂದಿದ್ದು, ತಾಂತ್ರಿಕ ಕೋಟಾದಡಿಯಲ್ಲಿ ಬರುವ ಅಭ್ಯರ್ಥಿಗಳು. |

**ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಿದೆ:**

| | | |
|---|---|---|
| 1 | ಅಭ್ಯರ್ಥಿಗಳು ಪರೀಕ್ಷಾ ಶುಲ್ಕವನ್ನು ಪಾವತಿಸಲು ಮತ್ತು ಭರ್ತಿ ಮಾಡಿದ ಅರ್ಜಿಗಳನ್ನು ವೇತನ ವಿತರಣಾಧಿಕಾರಿಗಳಿಗೆ ಸಲ್ಲಿಸುವ ದಿನಾಂಕ | 01.10.2021 ರಿಂದ<br>16.10.2021 ರವರೆಗೆ |
| 2 | ಸಂಬಂಧ ಪಟ್ಟ ವಿಭಾಗದಿಂದ ಕ್ರೋಢೀಕರಿಸಿದ ಅರ್ಜಿಗಳನ್ನು ನಿಗಮ ಕಾರ್ಯಾಲಯಕ್ಕೆ ಸಲ್ಲಿಸಲು ಕೊನೆಯ ದಿನಾಂಕ | 21.10.2021 |

ಈ ಕೆಳಕಂಡ ಷರತ್ತುಗಳು ಹಾಗೂ ನಿಯಮಗಳಿಗೆ ಒಳಪಟ್ಟು ಇಲಾಖಾ ಪರೀಕ್ಷೆಗೆ ಅರ್ಜಿ ಸಲ್ಲಿಸತಕ್ಕದ್ದು.

## I. ಷರತ್ತುಗಳು ಹಾಗೂ ಸಾಮಾನ್ಯ ಸೂಚನೆಗಳು:

1. ಕವಿಪ್ರನಿನಿ ನೌಕರರ ಸೇವಾ ನಿಯಮಗಳು ಅಪೆಂಡಿಕ್ಸ್-3 ಕ್ರಮ ಸಂಖ್ಯೆ (4) ರ ಅನ್ವಯ ಮೊದಲ ಎರಡು ಪ್ರಯತ್ನಗಳಿಗೆ ಪರೀಕ್ಷಾ ಶುಲ್ಕ ಪಾವತಿಸುವುದರಿಂದ ವಿನಾಯಿತಿ ಇದ್ದು ಪರೀಕ್ಷಾ ಶುಲ್ಕ ವಿನಾಯಿತಿ ಹೊಂದಿಲ್ಲದ ಅಭ್ಯರ್ಥಿಗಳು ಎಕ್ಸಿಕ್ಯೂಟೀವ್ ಲೋಯರ್ ಪರೀಕ್ಷೆಗೆ ಪ್ರತ್ಯೇಕವಾಗಿ ನಿಗಮದ/ ವಿತರಣಾ ಕಂಪನಿಗಳ ಯಾವುದಾದರೂ ಕಛೇರಿಯಲ್ಲಿ ಪರೀಕ್ಷಾ ಶುಲ್ಕ ರೂ.200/-(ಪರೀಕ್ಷಾ ಶುಲ್ಕ)+ರೂ.36/-(18% ಸರಕು ಮತ್ತು ಸೇವಾ ತೆರಿಗೆ)+ಒಟ್ಟು

ರೂ.236/- ವನ್ನು ದಿನಾಂಕ: 01-10-2021 ರಿಂದ ದಿನಾಂಕ: 16-10-2021 ರ ಒಳಗೆ ಪಾವತಿಸಿ ಭರ್ತಿ ಮಾಡಿದ ಅರ್ಜಿಗಳೊಂದಿಗೆ ವೇತನ ವಿತರಣಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು. ಮತ್ತು ಒಂದು ಅವಧಿಯ ಪರೀಕ್ಷೆಗೆ ಸಂದಾಯವಾದ ಶುಲ್ಕವನ್ನು ಮುಂದಿನ ಅವಧಿಯ ಪರೀಕ್ಷೆಗಳಿಗೆ ಹೊಂದಿಸಲಾಗುವುದಿಲ್ಲ ಹಾಗೂ ಅಜಾಗರೂಕತೆಯಿಂದ ಹೆಚ್ಚಾಗಿ ಕಟ್ಟುವ ಶುಲ್ಕವನ್ನು ಹೊಂದಾಣಿಕೆ/ಮರುಪಾವತಿ ಮಾಡಲಾಗುವುದಿಲ್ಲ.

2. ಅಭ್ಯರ್ಥಿಗಳು ಭರ್ತಿ ಮಾಡಿ ಸಲ್ಲಿಸಿದ ಎಲ್ಲ ಅರ್ಜಿಗಳನ್ನು ವೇತನ ವಿತರಣಾಧಿಕಾರಿಗಳು ಪರಿಶೀಲಿಸಿ, ದೃಢೀಕರಿಸಿ ಸಂಬಂಧಪಟ್ಟ ಕಚೇರಿಯಿಂದ ಕ್ರೋಢೀಕರಿಸಿದ ಪತ್ರದೊಂದಿಗೆ ಈ ಕಚೇರಿಗೆ ದಿನಾಂಕ **21.10.2021 ರೊಳಗೆ ಸಲ್ಲಿಸ ತಕ್ಕದ್ದು.**
3. ಕೆಲಸಕ್ಕೆ ಸೇರಿದ ದಿನಾಂಕ ಮತ್ತು ಹುದ್ದೆ ಮತ್ತು ಪ್ರಸ್ತುತ ನಿರ್ವಹಿಸುತ್ತಿರುವ ಹುದ್ದೆ ಮತ್ತು ದಿನಾಂಕ ಕಡ್ಡಾಯವಾಗಿ ಪರೀಕ್ಷಾ ಅರ್ಜಿಯಲ್ಲಿ ನಮೂದಿಸುವುದು.
4. ದಿನಾಂಕ 22.04.2015 ರಂದು ಅಥವಾ ಇದಕ್ಕಿಂತ ಮುಂಚಿತವಾಗಿ ಎ.ಐ.ಸಿ.ಟಿ.ಇ ಮತ್ತು ಕರ್ನಾಟಕ ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಮಾನ್ಯತೆ ಪಡೆದ ಕಾಲೇಜಿನಲ್ಲಿ ಕವಿಪ್ರನಿನಿ /ಎಸ್ಕಾಂ ಗಳ ಮೂಲಕ ನಿರಾಕ್ಷೇಪಣಾ ಪತ್ರವನ್ನು ಪಡೆದು, ಎಲೆಕ್ಟ್ರಾನಿಕ್ಸ್ (ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್), ಟೆಲಿಕಮ್ಯೂನಿಕೇಷನ್ ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೋಮಾ ಪಡೆದಂತಹ ನೌಕರರು ಅರ್ಹರಾಗಿರುತ್ತಾರೆ ಮತ್ತು ದಿನಾಂಕ 22.04.2015 ರಂದು ಅಥವಾ ಇದಕ್ಕಿಂತ ಮುಂಚಿತವಾಗಿಯೇ ಪ್ರವೇಶಾತಿ ಹೊಂದಿ ತದನಂತರದಲ್ಲಿ ಉತ್ತೀರ್ಣರಾದಂತಹ ಅಭ್ಯರ್ಥಿಗಳು ಸಹಾ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.
5. ಕರ್ನಾಟಕ ರಾಜ್ಯದ ಪಾಲಿಟೆಕ್ನಿಕ್ ಇಂಜಿನಿಯರಿಂಗ್‌ನಲ್ಲಿ ರೆಗ್ಯೂಲರ್ ಕಾಲೇಜ್ ಮೋಡ್ ನಲ್ಲಿ ಎಲೆಕ್ಟ್ರಿಕಲ್/ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ನಲ್ಲಿ ಡಿಪ್ಲೋಮಾ ವಿದ್ಯಾರ್ಹತೆ ಹೊಂದಿದ / ಎರಡು ವರ್ಷದ ಐ.ಟಿ.ಐ/ಐ.ಟಿ.ಸಿ ಸರ್ಟಿಫಿಕೇಟ್ ಕೋರ್ಸ್ ಹೊಂದಿರುವ ತಾಂತ್ರಿಕ ಕೋಟಾದಡಿಯಲ್ಲಿ ನೇರ ನೇಮಕಾತಿ ಹೊಂದಿರುವ) ವಿವರ ಕಡ್ಡಾಯವಾಗಿ ನಮೂದಿಸುವುದು. ಡಿಪ್ಲೋಮಾ ವಿದ್ಯಾರ್ಹತೆ ಹೊಂದಿಲ್ಲದ ತಾಂತ್ರಿಕವಲ್ಲದ ಕೋಟಾದಡಿಯಲ್ಲಿ ಬರುವ ಅಭ್ಯರ್ಥಿಗಳ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಕಳುಹಿಸಬಾರದು.

## II. <u>ಅಭ್ಯರ್ಥಿಗಳಿಗೆ ಸೂಚನೆಗಳು:</u>

1. ಅಭ್ಯರ್ಥಿಗಳು ನಿಗದಿತ ಹೊಸ ನಮೂನೆಯ ಅರ್ಜಿಯನ್ನು ಕವಿಪ್ರನಿನಿಯ ವೆಬ್ ಸೈಟ್‌ನಿಂದ ಪಡೆದು (www.kptcl.com/eprasarana ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ) ಪರಿಪೂರ್ಣವಾಗಿ ಭರ್ತಿ ಮಾಡಿ, ಸಹಿಯನ್ನು ದಾಖಲಿಸಿ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅರ್ಜಿಯ ಹಾಗೂ ಪ್ರವೇಶಪತ್ರದ ಮೇಲೆ ಕಡ್ಡಾಯವಾಗಿ ಅಂಟಿಸಿ, ಸಂಬಂಧಪಟ್ಟ ಮುಖ್ಯಸ್ಥರ ಸಹಿ ಮತ್ತು ಕಚೇರಿ ಮುದ್ರೆಯೊಡನೆ ದೃಢೀಕರಿಸಿದ ಅರ್ಜಿಯನ್ನು, ವೇತನ ವಿತರಣಾಧಿಕಾರಿಗಳಿಗೆ **ದಿನಾಂಕ:**16.10.2021 ರ ಒಳಗೆ ಸಲ್ಲಿಸತಕ್ಕದ್ದು. ನಿಗದಿತ ದಿನಾಂಕದೊಳಗೆ ಸಲ್ಲಿಸದಿದ್ದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
2. ಅರ್ಜಿಯ ಎಲ್ಲಾ ಕಾಲಂಗಳನ್ನು ಸರಿಯಾಗಿ ಭರ್ತಿ ಮಾಡತಕ್ಕದ್ದು. ಉದಾ: ಹೆಸರು, ಕೆಲಸಕ್ಕೆ ಸೇರಿದ ದಿನಾಂಕ ಮತ್ತು ಸೇರಿದಾಗ ಹೊಂದಿದ ಹುದ್ದೆ, ಪ್ರಸ್ತುತ ನಿರ್ವಹಿಸುತ್ತಿರುವ ಹುದ್ದೆ, ಪರೀಕ್ಷಾ ಐ.ಡಿ ಸಂಖ್ಯೆ, ವಿನಾಯಿತಿ ಹೊಂದಿರುವ ವಿವರ ಇತ್ಯಾದಿ.
3. ಅರ್ಜಿ ನಮೂನೆಯಲ್ಲಿ ಅಭ್ಯರ್ಥಿಗಳು ತಮ್ಮ ಹೆಸರುಗಳನ್ನು ಸೇವಾಪುಸ್ತಕದಲ್ಲಿ ನಮೂದಿಸಿರುವಂತೆಯೇ ಬಿಡಿ ಅಕ್ಷರಗಳಲ್ಲಿ **(IN BLOCK LETTERS) ಕನ್ನಡದಲ್ಲಿ ಹಾಗೂ ಇಂಗ್ಲೀಷಿನಲ್ಲಿ ಭರ್ತಿ ಮಾಡುವುದು.**

4. ಇಲಾಖಾ ಪರೀಕ್ಷಾ ಮಂಡಳಿಯಿಂದ ನೀಡಲಾಗಿರುವ **ಐ.ಡಿ. ಸಂಖ್ಯೆ ಯನ್ನು (I.D. number as mentioned in marks cards issued)** ತಪ್ಪದೇ ನಮೂದಿಸುವುದು.

5. ಅಭ್ಯರ್ಥಿಯು ಯಾವುದಾದರೂ ಪತ್ರಿಕೆಯಲ್ಲಿ ವಿನಾಯಿತಿ ಹೊಂದಿದ್ದಲ್ಲಿ, ಪೂರ್ಣ ವಿವರಗಳನ್ನು ಅರ್ಜಿಯಲ್ಲಿ ನಿಗದಿಪಡಿಸಿದ ಸ್ಥಳದಲ್ಲಿ ನಮೂದಿಸತಕ್ಕದ್ದು.

6. ಎಕ್ಸಿಕ್ಯೂಟೀವ್ ಲೋಯರ್ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಿರುವ ನೌಕರರು, ಅರ್ಜಿಯಲ್ಲಿ ವಿದ್ಯಾರ್ಹತೆ (ಡಿಪ್ಲೋಮಾ) ವಿವರ ಕಡ್ಡಾಯವಾಗಿ ನಮೂದಿಸುವುದು ಹಾಗೂ ಡಿಪ್ಲೋಮಾ ಕೋರ್ಸ್‌ನ ಪದವಿ ಪ್ರಮಾಣ ಪತ್ರ ಪ್ರತಿಯನ್ನು ಕಛೇರಿ ಮುಖ್ಯಸ್ಥರಿಂದ ದೃಢೀಕರಣವನ್ನು ಪಡೆದು **ಕಡ್ಡಾಯವಾಗಿ** ಲಗತ್ತಿಸತಕ್ಕದ್ದು. ಹಾಗೂ ಆ ಬಗ್ಗೆ ಪೂರ್ಣ ವಿವರಗಳನ್ನು ಅರ್ಜಿ ನಮೂನೆಯಲ್ಲಿ ನಿಗದಿಪಡಿಸಿದ ಸ್ಥಳದಲ್ಲಿ ನಮೂದಿಸತಕ್ಕದ್ದು.

7. ಕೆಲವು ವಿಷಯಗಳಲ್ಲಿ ಕವಿಪ್ರನಿನಿ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳು ತಮ್ಮದೇ ಆದ ನಿಯಮಾವಳಿಗಳನ್ನು ರೂಪಿಸಿಕೊಂಡಿದ್ದರೂ, ಸದರಿ ಪರೀಕ್ಷೆಗೆ ಕವಿಪ್ರನಿನಿ ರೂಪಿಸಿರುವ ನಿಯಮಾವಳಿಗಳನ್ನೇ ಪರಿಗಣಿಸಲಾಗುವುದು.

8. ಪ್ರತಿ ಪತ್ರಿಕೆಯಲ್ಲೂ ಕನಿಷ್ಠ 35 ಅಂಕಗಳನ್ನು ಗಳಿಸಬೇಕು ಹಾಗೂ ಸರಾಸರಿ ಶೇಕಡ 40 ರಷ್ಟು ಅಂಕಗಳನ್ನು ಗಳಿಸಿದಲ್ಲಿ ಪರೀಕ್ಷೆಯಲ್ಲಿ ಉತ್ತೀರ್ಣರಾಗುವರು. ಯಾವುದೇ ಪತ್ರಿಕೆಯಲ್ಲಿ ಶೇಕಡಾ 40 ರಷ್ಟು ಅಥವಾ ಅದಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದಲ್ಲಿ, ಅಭ್ಯರ್ಥಿಯು ಮುಂದಿನ ಪರೀಕ್ಷೆಯಲ್ಲಿ ಆ ಪತ್ರಿಕೆಗೆ ವಿನಾಯಿತಿಯನ್ನು ಪಡೆಯುತ್ತಾರೆ.

9. ಅಭ್ಯರ್ಥಿಯು ಅರ್ಜಿಯಲ್ಲಿ ಸುಳ್ಳು ಅಥವಾ ತಪ್ಪು ಮಾಹಿತಿ ಒದಗಿಸಿದಲ್ಲಿ ನಿಯಮಾನುಸಾರ ಶಿಸ್ತಿನ ಕ್ರಮವನ್ನು ಜರುಗಿಸಲಾಗುವುದು.

## III. ಅರ್ಜಿಗಳನ್ನು ದೃಢೀಕರಿಸುವ ಸಕ್ಷಮ ಪ್ರಾಧಿಕಾರಿಗಳಿಗೆ ಸೂಚನೆಗಳು:

1. **ಅಭ್ಯರ್ಥಿಗೆ ಸದರಿ ಪರೀಕ್ಷೆಯು ಅರ್ಹತಾ ಪರೀಕ್ಷಾರ್ಥ ಅವಧಿ ಪೂರ್ಣಗೊಳಿಸಲು/ ಮುಂದಿನ ಪದೋನ್ನತಿ ಹೊಂದಲು ಅನಿವಾರ್ಯವುಳ್ಳವರಾಗಿರುವುದನ್ನು ದೃಢಪಡಿಸಿಕೊಳ್ಳುವುದು.**

2. ಅಭ್ಯರ್ಥಿಗಳು ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯನ್ನು ಸಂಬಂಧಪಟ್ಟ ಉಲೆನಿ/ ಲೆಕ್ಕಾಧಿಕಾರಿ/ ಸಹಾಯಕ ಲೆಕ್ಕಾಧಿಕಾರಿರವರು ಸೇವಾಪುಸ್ತಕದಲ್ಲಿ ನಮೂದಿಸಿದ ದಾಖಲೆಯೊಂದಿಗೆ ಪರಿಶೀಲಿಸಿ ಈ ಕೆಳಕಂಡ ವಿವರಗಳನ್ನು ದೃಢೀಕರಿಸುವುದು.

   - ಅಭ್ಯರ್ಥಿಯ ಹೆಸರು, ಕೆಲಸಕ್ಕೆ ಸೇರಿದ ದಿನಾಂಕ ಹಾಗೂ ಹುದ್ದೆ ಮತ್ತು ಪ್ರಸ್ತುತ ನಿರ್ವಹಿಸುತ್ತಿರುವ ಹುದ್ದೆ ಹಾಗೂ ಸದರಿ ಹುದ್ದೆಗೆ ವರದಿ ಮಾಡಿಕೊಂಡ ದಿನಾಂಕ.
   - ಅಭ್ಯರ್ಥಿಯು ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದಲ್ಲಿ ಅಥವಾ ಯಾವುದಾದರೂ ಪತ್ರಿಕೆಯಲ್ಲಿ ವಿನಾಯಿತಿ ಪಡೆದಿರುವ ವಿವರ.
   - ಅಭ್ಯರ್ಥಿಯು ಸದರಿ ಪರೀಕ್ಷೆಗೆ ಮಾಡಿರುವ ಪ್ರಯತ್ನಗಳ ಸಂಖ್ಯೆ. ಪರೀಕ್ಷಾ ಶುಲ್ಕ ವಿನಾಯಿತಿ ಹೊಂದಿಲ್ಲದ ಅಭ್ಯರ್ಥಿಗಳು ಪರೀಕ್ಷಾ ಶುಲ್ಕವನ್ನು ನಿಗದಿತ ಅವಧಿಯಲ್ಲಿ ಪಾವತಿಸಿರುವ ಹಾಗೂ ಮೂಲ ರಶೀದಿಯನ್ನು ಅರ್ಜಿಯಲ್ಲಿ ನಿಗದಿ ಪಡಿಸಿದ ಸ್ಥಳದಲ್ಲಿ ಅಂಟಿಸಿರುವ ಬಗ್ಗೆ.
   - ಅಭ್ಯರ್ಥಿಗಳು ಪ್ರವೇಶ ಪತ್ರದಲ್ಲಿನ ವಿವರಗಳನ್ನು ಪೂರ್ಣವಾಗಿ ಭರ್ತಿ ಮಾಡಿ, ಮಾದರಿ ರುಜುವನ್ನು ಕಛೇರಿಯ ಮುಖ್ಯಸ್ಥರಿಂದ ಸಹಿ ಮತ್ತು ಮುದ್ರೆಯೊಡನೆ ದೃಢೀಕರಿಸಿರುವ ಬಗ್ಗೆ.
   - ಎಕ್ಸಿಕ್ಯೂಟೀವ್ ಲೋಯರ್ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಯ ಪರೀಕ್ಷಾ ಅರ್ಜಿಯಲ್ಲಿ ವಿದ್ಯಾರ್ಹತೆ (ಕರ್ನಾಟಕ ರಾಜ್ಯದ ಪಾಲಿಟೆಕ್ನಿಕ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೋಮಾ ವಿದ್ಯಾರ್ಹತೆ / ತಾಂತ್ರಿಕ ಕೋಟಾದಡಿಯಲ್ಲಿರುವ ಅಭ್ಯರ್ಥಿಗಳು ಎರಡು ವರ್ಷದ ಐ.ಟಿ.ಐ / ಐ.ಟಿ.ಸಿ. ಸರ್ಟಿಫಿಕೇಟ್ ಕೋರ್ಸ್) ವಿವರಗಳನ್ನು ನಮೂದಿಸಿರುವುದನ್ನು ಹಾಗೂ ಕೋರ್ಸ್‌ನ ಪ್ರಮಾಣ ಪತ್ರ ಹಾಗೂ ಅಂಕಪಟ್ಟಿಗಳ ಪ್ರತಿಗಳನ್ನು ದೃಢೀಕರಿಸಿ ಲಗತ್ತಿಸಿರುವುದನ್ನು ಖಾತರಿ ಪಡಿಸಿಕೊಳ್ಳುವುದು.

- ಎ.ಐ.ಸಿ.ಟಿ.ಇ ಮತ್ತು ಕರ್ನಾಟಕ ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಮಾನ್ಯತೆ ಪಡೆದ ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ಸ್ (ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್), ಟೆಲಿಕಮ್ಯೂನಿಕೇಷನ್ ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂಗ್ ಡಿಪ್ಲೋಮಾ ವಿದ್ಯಾರ್ಹತೆಯನ್ನು ಪಡೆಯಲು ದಿನಾಂಕ 22.04.2015 ರಂದು ಅಥವಾ ಇದಕ್ಕಿಂತ ಮುಂಚಿತವಾಗಿಯೇ ಪ್ರವೇಶಾತಿ ಹೊಂದಿ ತದನಂತರದಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಕವಿಪ್ರನಿನಿ/ಎಸ್ಕಾಂ ಗಳ ಮೂಲಕ ನಿರಾಕ್ಷೇಪಣಾ ಪತ್ರವನ್ನು ಪಡೆದಿರುವುದನ್ನು ದೃಢೀಕರಿಸಿ ಲಗತ್ತಿಸಿರುವುದನ್ನು ಖಾತರಿ ಪಡಿಸಿಕೊಳ್ಳುವುದು.
- ಅರ್ಜಿ ನಮೂನೆಗೆ ಲಗತ್ತಿಸಿರುವ ಪ್ರವೇಶ ಪತ್ರದ ನಮೂನೆಯನ್ನು ಪರಿಶೀಲಿಸುವುದು.
- ಅಭ್ಯರ್ಥಿಗಳು ತಮ್ಮ ಇತ್ತೀಚೆಗಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಅರ್ಜಿಯಲ್ಲಿ ಹಾಗೂ ಪ್ರವೇಶಪತ್ರದಲ್ಲಿ ಅಂಟಿಸಿರುವುದರ ಮತ್ತು ಸಂಬಂಧಪಟ್ಟ ಮುಖ್ಯಸ್ಥರ ಸಹಿ ಮತ್ತು ಕಚೇರಿ ಮುದ್ರೆಯೊಡನೆ ದೃಢೀಕರಿಸಿದ ಬಗ್ಗೆ.

3. ಅಭ್ಯರ್ಥಿಗಳು ಸಲ್ಲಿಸಿದ ಅರ್ಜಿಗಳನ್ನು ವೇತನ ವಿತರಣಾಧಿಕಾರಿಗಳು ದೃಢೀಕರಿಸಿದ ನಂತರ ನೋಂದಣಿ ಅಂಚೆಯ ಮೂಲಕ ಅಥವಾ ಖುದ್ದಾಗಿ **ದಿನಾಂಕ: 21-10-2021** ರೊಳಗಾಗಿ ಈ ಕೆಳಕಂಡ ನಮೂನೆಯಲ್ಲಿ ಕ್ರೋಢೀಕರಿಸಿದ ಪತ್ರದೊಂದಿಗೆ ಲಗತ್ತಿಸಿ **"ಸದಸ್ಯ ಕಾರ್ಯದರ್ಶಿ, ಇಲಾಖಾ ಪರೀಕ್ಷಾ ಮಂಡಳ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು"** ವಿಳಾಸಕ್ಕೆ ಸಲ್ಲಿಸುವುದು. ಗೊತ್ತುಪಡಿಸಿದ ದಿನಾಂಕದ ನಂತರ ಬರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು, ವಿಳಂಬವಾದಲ್ಲಿ ಸಂಬಂಧಿಸಿದ ವಿಭಾಗಾಧಿಕಾರಿಗಳು ನೇರ ಹೊಣೆಗಾರರಾಗಿರುತ್ತಾರೆ.

| ಕ್ರ. ಸಂ | ಅಭ್ಯರ್ಥಿಗಳ ಹೆಸರು | ಪದನಾಮ | ಕೆಲಸ ಮಾಡುತ್ತಿರುವ ಸ್ಥಳ | ತೆಗೆದುಕೊಳ್ಳುತ್ತಿರುವ ಪರೀಕ್ಷೆ | ಪ್ರಯತ್ನಗಳ ಸಂಖ್ಯೆ |
|---|---|---|---|---|---|
| | | | | | |
| | | | | | |

**ಸಾರಾಂಶ**

| ಕ್ರ. ಸಂ | ಪರೀಕ್ಷೆಯ ಹೆಸರು | ಅರ್ಜಿಗಳ ಸಂಖ್ಯೆ |
|---|---|---|
| 1 | ಎಕ್ಸಿಕ್ಯೂಟೀವ್ ಲೋಯರ್ | |
| | **ಒಟ್ಟು ಅರ್ಜಿಗಳ ಸಂಖ್ಯೆ** | |

**IV. ವಿಶೇಷ ಸೂಚನೆ:**

ಪ್ರಸರಣ ವಲಯ, ವೃತ್ತ ಹಾಗೂ ಎಲ್ಲಾ ವಿಭಾಗ / ಉಪ ವಿಭಾಗ ಕಛೇರಿಗಳ ಮುಖ್ಯಸ್ಥರು ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಕಾರ್ಯ ಮತ್ತು ಪಾಲನಾ ಘಟಕ/ ಶಾಖಾ ಕಛೇರಿಗಳು / ಸ್ವೀಕರಣಾ ಕೇಂದ್ರಗಳು / ಎಂ.ಯು.ಎಸ್.ಎಸ್.ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರಿಗೆ ಈ ಸುತ್ತೋಲೆಯ ಬಗ್ಗೆ ಮಾಹಿತಿ ನೀಡಿ ಮತ್ತು ತಮ್ಮ ಅಧೀನದಲ್ಲಿ ಬರುವ ಕಛೇರಿಗಳಿಗೆ ಈ ಸುತ್ತೋಲೆಯನ್ನು ತಲುಪಿಸುವುದಕ್ಕೆ ಸೂಕ್ತ ವ್ಯವಸ್ಥೆ ಮಾಡುವುದು, ಅವರುಗಳ ಗಮನಕ್ಕೆ ತಂದಿರುವ ವಿಚಾರದಲ್ಲಿ ಕಛೇರಿಯ ದಾಖಲೆಗಳನ್ನು ಕಾಪಾಡುವುದು. ತಪ್ಪಿದಲ್ಲಿ ಮುಂದೇನಾದರೂ ತಕರಾರುಗಳು ಬಂದರೆ ಕಛೇರಿಯ ಮುಖ್ಯಸ್ಥರುಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಹಾಗೂ ಈ ಮೇಲೆ ತಿಳಿಸಿರುವ ಯಾವುದಾದರೂ ಷರತ್ತು/ಸೂಚನೆಗಳನ್ನು ಉಲ್ಲಂಘಿಸಿದ, ಅಪೂರ್ಣ ಹಾಗು ವಿಳಂಬವಾಗಿ ಬಂದ ಅರ್ಜಿಗಳನ್ನು ಯಾವುದೇ ಸೂಚನೆಯಿಲ್ಲದೆ ತಿರಸ್ಕರಿಸಲಾಗುವುದು.

1/10/21

ಸದಸ್ಯ ಕಾರ್ಯದರ್ಶಿ.
ಇಲಾಖಾ ಪರೀಕ್ಷಾ ಮಂಡಳ, ಕವಿಪ್ರನಿನಿ.

ಪ್ರತಿಗಳು:

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ವಿ.ಸ.ಕಂ./ಪಿಸಿಕೆಎಲ್
2. ಎಲ್ಲಾ ನಿರ್ದೇಶಕರು, (ತಾಂತ್ರಿಕ), ವಿ.ಸ.ಕಂ. / ನಿರ್ದೇಶಕರು(ಹಣಕಾಸು), ಬೆವಿಕಂ, ಹುವಿಸಕಂ.
3. ಆರ್ಥಿಕ ಸಲಹೆಗಾರರು (ಆಂ.ಪ)/ ಮು.ಇಂ(ವಿ) ಪಿ ಮತ್ತು ಸಿ /ಟಿ ಮತ್ತು ಪಿ, ಕವಿಪ್ರನಿನಿ ಮತ್ತು ಸದಸ್ಯರುಗಳು, ಇಲಾಖಾ ಪರೀಕ್ಷಾ ಮಂಡಳ, ಕವಿಪ್ರನಿನಿ.
4. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ,/ವಿ.ಸ.ಕಂ.
5. ಎಲ್ಲಾ ಮುಖ್ಯ ಇಂಜಿನಿಯರ್ (ವಿ), ಕವಿಪ್ರನಿನಿ,/ವಿ.ಸ.ಕಂ.
6. ಆಡಳಿತಾಧಿಕಾರಿ, ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, ಕವಿಪ್ರನಿನಿ, ಹೂಡಿ, ಬೆಂಗಳೂರು ರವರ ಮಾಹಿತಿಗಾಗಿ.
7. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು /(ಪ್ರಸರಣ)/(ಹಣಕಾಸು) /(ಆ ಮತ್ತು ಮಾ.ಸಂ)/ನಿರ್ದೇಶಕರು ಮತ್ತು ಕಂಪನಿ ಕಾರ್ಯದರ್ಶಿ ಇವರುಗಳ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ ಬೆಂಗಳೂರು.

ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ **www.kptcl.com/eprasarana** ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

8. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ),/ ಎಲ್ಲಾ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ವಿ.ಸ.ಕಂ.
9. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) / ಎಲ್ಲಾ ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ವಿ.ಸ.ಕಂ.
10. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ) ಕವಿಪ್ರನಿನಿ/ವಿಸಕಂ.
11. ಕ್ರೋಡೀಕರಣ ಘಟಕ, ಕವಿಪ್ರನಿನಿ ಕಾವೇರಿ ಭವನ ಬೆಂಗಳೂರು.

ಪ್ರತಿಗಳನ್ನು ಸೂಕ್ತ ಮಾಹಿತಿಗಾಗಿ:

1. ಶ್ರೀ ಟಿ ಆರ್ ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿನಿ ನೌಕರರ ಸಂಘ, ಬೆಂಗಳೂರು ಹಾಗು ನಿರ್ದೇಶಕರು, ಕವಿಪ್ರನಿನಿ / ಎಲ್ಲಾ ವಿಸಕಂ.
2. ಶ್ರೀ ಟಿ ಎಂ ಶಿವಪ್ರಕಾಶ್, ಅಧ್ಯಕ್ಷರು, ಕೆ.ಇ.ಬಿ ಇಂಜಿನಿಯರುಗಳ ಸಂಘ, ಬೆಂಗಳೂರು ಹಾಗು ನಿರ್ದೇಶಕರು, ಕವಿಪ್ರನಿನಿ / ಎಲ್ಲಾ ವಿಸಕಂ.
3. ಪ್ರಧಾನ ಕಾರ್ಯದರ್ಶಿಗಳು, ಕವಿಪ್ರನಿನಿ, ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿಗಳು, ಕೆ.ಇ.ಬಿ, ಇಂಜಿನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿಗಳು, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿಗಳು, ಕೆ.ಇ.ಬಿ ಪ.ಜಾ./ಪ.ಪಂ. ನೌಕರರ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿಗಳು, ಕವಿಪ್ರನಿನಿ, ಡಿಪ್ಲೊಮಾ ಇಂಜಿನಿಯರುಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿಗಳು, ಕವಿಪ್ರನಿನಿ/ಎಸ್ಕಾಂ, ಪ.ಜಾ./ಪ.ಪಂ. ಅಧಿಕಾರಿಗಳ ಸಂಘ, ಬೆಂಗಳೂರು.

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## 20 __ ಸಾಲಿನ ಎಕ್ಸಿಕ್ಯೂಟೀವ್ ಲೋಯರ್ ಪರೀಕ್ಷೆಯ ಪ್ರವೇಶಕ್ಕಾಗಿ ಅರ್ಜಿ ನಮೂನೆ

| |
|---|
| ಭಾವಚಿತ್ರ ಅಂಟಿಸಬೇಕು ಹಾಗೂ ಕಛೇರಿ ಮುಖ್ಯಸ್ಥರು ದೃಢೀಕರಿಸಬೇಕು. |

| | |
|---|---|
| ನೋ.ಸಂ. | |

| | | |
|---|---|---|
| ಪತ್ರಿಕೆಗಳು | 1 | 2 |

(ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡುವ ಮೊದಲು ಸುತ್ತೋಲೆಯಲ್ಲಿನ ಷರತ್ತು ಹಾಗೂ ಸೂಚನೆಗಳನ್ನು ಗಮನಿಸಿ)

| ಕ್ರ.ಸಂ. | ವಿವರಗಳು | |
|---|---|---|
| 1. | ಅಭ್ಯರ್ಥಿಯ ಹೆಸರು ಬಿಡಿ ಅಕ್ಷರಗಳಲ್ಲಿ:<br>(ಸೇವಾ ಪುಸ್ತಕದಲ್ಲಿ ನಮೂದಿಸಿರುವಂತೆ)<br>**(IN BLOCK LETTERS)** | ಕನ್ನಡ ಭಾಷೆಯಲ್ಲಿ:<br>ಆಂಗ್ಲ ಭಾಷೆಯಲ್ಲಿ: |
| 2. | ಕೆಲಸಕ್ಕೆ ಸೇರಿದಾಗ ಹೊಂದಿದ ಹುದ್ದೆ ಮತ್ತು ದಿನಾಂಕ | ತಾಂತ್ರಿಕ ಕೋಟ ☐ ತಾಂತ್ರಿಕವಲ್ಲದ ಕೋಟ ☐ |
| 3. | ಪ್ರಸ್ತುತ ಹೊಂದಿದ ಹುದ್ದೆ ಮತ್ತು ದಿನಾಂಕ: | |
| 4. | ಕೆಲಸ ಮಾಡುತ್ತಿರುವ ಕಚೇರಿ: | ಕಚೇರಿ:<br>ವಿಭಾಗ:<br>ವೃತ್ತ: ಕಂಪನಿ: |
| 5. | ಐ.ಡಿ.ಸಂಖ್ಯೆ:<br>(ಈಗಾಗಲೇ ಇಲಾಖಾ ಪರೀಕ್ಷಾ ಮಂಡಳಿಯಿಂದ ನೀಡಲಾಗಿದ್ದಲ್ಲಿ ಐ.ಡಿ.ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸುವುದು) | |
| 6. | ಉದ್ಯೋಗಪೂರ್ವ ತರಬೇತಿಯನ್ನು (pre-employment training) ಪೂರ್ಣಗೊಳಿಸಿ ಉತ್ತೀರ್ಣತೆ ಹೊಂದಿರುವ ವಿವರ: | |
| 7. | ಅಭ್ಯರ್ಥಿಯು ಡಿಪ್ಲೋಮಾ/ಎರಡು ವರ್ಷದ ಐ.ಟಿ.ಐ./ಐ.ಟಿ.ಸಿ. ಸರ್ಟಿಫಿಕೇಟ್ ಕೋರ್ಸ್ ಪೂರ್ಣಗೊಳಿಸಿದ ವಿವರ:<br>(ಪ್ರಮಾಣ ಪತ್ರ ಮತ್ತು ಅಂಕಪಟ್ಟಿಗಳ ಪ್ರತಿಗಳನ್ನು ದೃಢೀಕರಿಸಿ ಲಗತ್ತಿಸಲಾಗಿದೆ.) | ಕಾಲೇಜಿನ ಹೆಸರು:<br>ರೆಗ್ಯುಲರ್ ☐ |
| 8. | ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ್ದಲ್ಲಿ, ವಿವರ: | |
| 9. | ಎಕ್ಸಿಕ್ಯೂಟೀವ್ ಲೋಯರ್ ಪರೀಕ್ಷೆಯಲ್ಲಿ ಈ ಹಿಂದೆ ಪಡೆದಿರುವ ವಿನಾಯಿತಿಗಳ ವಿವರ | |

7.

| ಹೆಸರು | ನೋಂದಣಿ ಸಂಖ್ಯೆ | ವರ್ಷ | ಷರಾ |
|---|---|---|---|
| | | | |

8.

| ಪರೀಕ್ಷೆಯ ಹೆಸರು | ನೋಂ.ಸಂ. | ತಿಂಗಳು | ವರ್ಷ | ಷರಾ |
|---|---|---|---|---|
| ಕನ್ನಡ ಭಾಷೆ | | | | |

9.

| ಪತ್ರಿಕೆ ಸಂಖ್ಯೆ | ನೋಂ.ಸಂ. | ತಿಂಗಳು | ವರ್ಷ | ಷರಾ |
|---|---|---|---|---|
| 1 | | | | |
| 2 | | | | |

| | | |
|---|---|---|
| 10. | ಸಂದಾಯ ಮಾಡಿರುವ ಪರೀಕ್ಷೆಯ ಶುಲ್ಕ:<br>(ಮೂಲ ರಶೀದಿಯನ್ನು ನಿಗದಿಪಡಿಸಿದ ಸ್ಥಳದಲ್ಲಿ ಅಂಟಿಸಬೇಕು) | ಮೊಬಲಗು: ರಶೀದಿ ಸಂಖ್ಯೆ:<br>ದಿನಾಂಕ: ಸ್ಥಳ: |
| 11. | ಪರೀಕ್ಷಾ ಶುಲ್ಕ ಸಂದಾಯ ಮಾಡುವುದರಿಂದ ವಿನಾಯಿತಿ ಇದ್ದರೆ ಈಗ ಎಷ್ಟನೆಯ ಪ್ರಯತ್ನ | ಮೊದಲನೆಯ \| ಎರಡನೆಯ \| ಎಷ್ಟನೆಯ ಪ್ರಯತ್ನ |
| 12. | ಡಿಪ್ಲೊಮೊ ವಿದ್ಯಾರ್ಹತೆ ಪಡೆಯಲು ಕವಿಪ್ರನಿನಿ/ಎಸ್ಕಾಂಗಳಿಂದ ಪಡೆದ ನಿರಾಕ್ಷೇಪಣಾ ಪತ್ರದ ಸಂಖ್ಯೆ ಮತ್ತು ದಿನಾಂಕ | |

ನಾನು ಈ ಮೂಲಕ ದೃಢೀಕರಿಸುವುದೇನೆಂದರೆ ನಾನು ನೇಮಕವಾದ ದಿನಾಂಕದಿಂದ ಈ ಪರೀಕ್ಷೆ ತೆಗೆದುಕೊಳ್ಳುತ್ತಿರುವುದು _______________ ಸಲ ಹಾಗೂ ಈ ಅರ್ಜಿಯಲ್ಲಿ ನಮೂದಿಸಿರುವ ಕ್ರ.ಸಂ.1 ರಿಂದ 12 ರವರೆಗಿನ ಎಲ್ಲಾ ವಿವರಗಳು ಸತ್ಯವಾಗಿವೆ. ತಪ್ಪು ಅಥವಾ ಅಪೂರ್ಣ ಮಾಹಿತಿ ಎಂದು ಕಂಡು ಬಂದಲ್ಲಿ ಯಾವುದೇ ಮುನ್ಸೂಚನೆ ನೀಡದೆ ಅರ್ಜಿಯನ್ನು ತಿರಸ್ಕರಿಸಬಹುದಾಗಿದೆ.

ಸ್ಥಳ: ಅಭ್ಯರ್ಥಿಯ ರುಜು:
ದಿನಾಂಕ: ಹುದ್ದೆ:

## ಕಚೇರಿ ದೃಢೀಕರಣ

1. ಅರ್ಜಿ ಕ್ರ.ಸಂಖ್ಯೆ (1) ರಿಂದ (12) ರವರೆಗೆ ಅಭ್ಯರ್ಥಿಯು ನಮೂದಿಸಿರುವ ವಿವರಗಳನ್ನು ಸೇವಾಪುಸ್ತಕದಲ್ಲಿ ನಮೂದಿಸಿರುವಂತೆ ಪರಿಶೀಲಿಸಲಾಗಿದೆ ಹಾಗು ಸರಿಯಾಗಿದೆ ಎಂದು ದೃಢೀಕರಿಸಲಾಗಿದೆ.

2. ದೃಢೀಕರಿಸುವುದೇನೆಂದರೆ ಅಭ್ಯರ್ಥಿಯು ಪರೀಕ್ಷಾ ಅರ್ಜಿಯನ್ನು ಸಲ್ಲಿಸಿರುವುದು ಅರ್ಹತಾ ಪರೀಕ್ಷೆಯನ್ನು ಪೂರ್ಣಗೊಳಿಸುವ/ಮುಂದಿನ ಉನ್ನತ ಹುದ್ದೆಗೆ ಬಡ್ತಿ ಪಡೆಯುವ ಉದ್ದೇಶಗಳಿಗೆ ನಿರ್ಬಂಧಕ/ಅನಿವಾರ್ಯವುಳ್ಳದ್ದಾಗಿದೆ.

3. ಅರ್ಜಿದಾರರು ಈ ಹಿಂದೆ ಕೆಳಕಂಡ ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುತ್ತಾರೆ:

| ಪರೀಕ್ಷೆಯ ಹೆಸರು | ನೋಂದಣಿ ಸಂಖ್ಯೆ | ತಿಂಗಳು | ವರ್ಷ | ಷರಾ |
|---|---|---|---|---|
| ಉದ್ಯೋಗಪೂರ್ವ ತರಬೇತಿ | | | | |
| ಕನ್ನಡ ಭಾಷೆ | | | | |

4. ಅರ್ಜಿದಾರರು ಎಕ್ಸಿಕ್ಯೂಟೀವ್ ಲೋಯರ್ ಪರೀಕ್ಷೆಯಲ್ಲಿ ಈ ಹಿಂದೆ ಕೆಳಕಂಡ ಪತ್ರಿಕೆಗಳಲ್ಲಿ ವಿನಾಯಿತಿ ಪಡೆದಿರುತ್ತಾರೆ.

| ಪತ್ರಿಕೆ ಸಂಖ್ಯೆ | ನೋಂದಣಿ ಸಂಖ್ಯೆ | ಐ.ಡಿ.ಸಂಖ್ಯೆ | ತಿಂಗಳು | ವರ್ಷ |
|---|---|---|---|---|
| 1 | | | | |
| 2 | | | | |

5. ಅಭ್ಯರ್ಥಿಯ ಡಿಪ್ಲೋಮಾ/ಎರಡು ವರ್ಷದ ಐ.ಟಿ.ಐ./ಐ.ಟಿ.ಸಿ. ಸರ್ಟಿಫಿಕೇಟ್ ಕೋರ್ಸ್ ಪೂರ್ಣಗೊಳಿಸಿರುತ್ತಾರೆ: (ಪ್ರಮಾಣ ಪತ್ರ ಮತ್ತು ಅಂಕಪಟ್ಟಿಗಳ ಪ್ರತಿಗಳನ್ನು ದೃಢೀಕರಿಸಿ ಲಗತ್ತಿಸಲಾಗಿದೆ.)

| ಕಾಲೇಜಿನ ಹೆಸರು | ನೋಂದಣಿ ಸಂಖ್ಯೆ | ವರ್ಷ | ಷರಾ |
|---|---|---|---|
| | | | |

ಕರ್ನಾಟಕ ರಾಜ್ಯದ ಪಾಲಿಟೆಕ್ನಿಕ್‌ನಲ್ಲಿ ರೆಗ್ಯೂಲರ್ ಕಾಲೇಜ್ ಮೋಡ್ ನಲ್ಲಿ ಡಿಪ್ಲೋಮಾ ಮಾಡಿರುತ್ತಾರೆಂದು ದೃಢೀಕರಿಸಲಾಗಿದೆ.

6. ಸಂದಾಯ ಮಾಡಿರುವ ಪರೀಕ್ಷೆಯ ಶುಲ್ಕ:

| ಮೊಬಲಗು | ರಶೀದಿ ಸಂಖ್ಯೆ | ದಿನಾಂಕ | ಸ್ಥಳ/ಕಛೇರಿ |
|---|---|---|---|
| | | | |

ಸಹಾಯಕ ಲೆಕ್ಕಾಧಿಕಾರಿ
ವಿಭಾಗ

ಲೆಕ್ಕಾಧಿಕಾರಿ
ವಿಭಾಗ

ರಶೀದಿಯನ್ನು ಇಲ್ಲಿ ಅಂಟಿಸಿ.

| ಪತ್ರಿಕೆಗಳು | 1 | 2 |
|---|---|---|

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಭಾವಚಿತ್ರ ಅಂಟಿಸಬೇಕು ಹಾಗೂ ಕಛೇರಿ ಮುಖ್ಯಸ್ಥರು ದೃಢೀಕರಿಸಬೇಕು.

**ಎಕ್ಸಿಕ್ಯೂಟೀವ್ ಲೋಯರ್ ಪರೀಕ್ಷೆಯ ಪ್ರವೇಶ ಪತ್ರ .............20.......**

| ನೋಂದಣಿ ಸಂಖ್ಯೆ: | |
|---|---|

| ಕ್ರ.ಸಂ. | ವಿವರಗಳು | |
|---|---|---|
| 1. | **ಅಭ್ಯರ್ಥಿಯ ಹೆಸರು ಬಿಡಿ ಅಕ್ಷರಗಳಲ್ಲಿ:**<br>(ಸೇವಾ ಪುಸ್ತಕದಲ್ಲಿ ನಮೂದಿಸಿರುವಂತೆ)<br>**(BLOCK LETTERS)** | |
| 2. | **ಹೊಂದಿರುವ ಹುದ್ದೆ :** | |
| 3. | **ಕೆಲಸ ಮಾಡುತ್ತಿರುವ ಕಚೇರಿ:** | |
| 4. | **ಅಭ್ಯರ್ಥಿಯ ಮಾದರಿ ರುಜು:** | |

ದೃಢೀಕರಿಸುವವರು
ಸಂಬಂಧಪಟ್ಟ ಸಕ್ಷಮಪ್ರಾಧಿಕಾರಿ
(ಸಹಿ ಮತ್ತು ಮುದ್ರೆಯೊಡನೆ)

ಸದಸ್ಯ ಕಾರ್ಯದರ್ಶಿ
ಇಲಾಖಾ ಪರೀಕ್ಷಾ ಮಂಡಳಿ, ಕವಿಪ್ರನಿನಿ

## ಅಭ್ಯರ್ಥಿಗಳಿಗೆ ಸೂಚನೆಗಳು:

1. **ಅಭ್ಯರ್ಥಿಗಳು ತಮ್ಮ ನೋಂದಣಿ ಸಂಖ್ಯೆಯನ್ನು ಉತ್ತರ ಪುಸ್ತಕದ ನಿಗದಿತ ಸ್ಥಳದಲ್ಲಿ ಮಾತ್ರ ನಮೂದಿಸಬೇಕು. ಆತ/ಆಕೆ ಹೆಚ್ಚುವರಿ ಹಾಳೆಯಲ್ಲಾಗಲಿ ಅಥವಾ ಉತ್ತರ ಪುಸ್ತಕದ ಯಾವುದೇ ಭಾಗದಲ್ಲಾಗಲಿ ತಮ್ಮ ನೋಂದಣಿ ಸಂಖ್ಯೆಯನ್ನು ಬರೆಯಬಾರದು.**
2. ಅಭ್ಯರ್ಥಿಗಳು ಉತ್ತರ ಪುಸ್ತಕ ಅಥವಾ ಹೆಚ್ಚುವರಿ ಹಾಳೆಯಲ್ಲಾಗಲಿ ತಮ್ಮ ಹೆಸರು/ಯಾವುದೇ ದೇವರ ಹೆಸರನ್ನು/ಧಾರ್ಮಿಕ ಚಿಹ್ನೆಯನ್ನು/ಯಾವ ತರಹದ ಗುರುತನ್ನು ಬರೆಯಬಾರದು/ ಮಾಡಬಾರದು.
3. ಪರೀಕ್ಷಾ ಸಭಾಂಗಣದಲ್ಲಿ ಮುಖ್ಯಪರಿವೀಕ್ಷಕರು/ ಪರಿವೀಕ್ಷಕರು ಯಾವಾಗ ಕೇಳಿದರೂ ಅಭ್ಯರ್ಥಿಗಳು ಪ್ರವೇಶ ಪತ್ರವನ್ನು ಹಾಜರುಪಡಿಸಬೇಕು.
4. ಪರೀಕ್ಷೆಯು ಪ್ರಾರಂಭವಾಗುವುದಕ್ಕೆ ಹತ್ತು ನಿಮಿಷಗಳ ಮುಂಚೆಯೇ ಅಭ್ಯರ್ಥಿಗಳು ತಮ್ಮ ಸ್ಥಳಗಳಲ್ಲಿರಬೇಕು.
5. ಅಭ್ಯರ್ಥಿಗಳು ಲೇಖನಿ/ಪೆನ್ನುಗಳನ್ನು ತಾವೇ ತರಬೇಕು.
6. ಪರೀಕ್ಷೆಯು ಪ್ರಾರಂಭವಾದ ಅರ್ಧಗಂಟೆಯ ನಂತರ ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯನ್ನು ಪ್ರವೇಶಿಸಲು ಹಾಗೂ ಪರೀಕ್ಷೆಯು ಪ್ರಾರಂಭವಾದ ನಂತರ ಅರ್ಧಗಂಟೆಗಿಂತ ಮುಂಚಿತವಾಗಿ ಯಾವುದೇ ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯಿಂದ ಹೊರ ಹೋಗಲು ಅನುಮತಿ ಕೊಡಲಾಗುವುದಿಲ್ಲ. ಪರೀಕ್ಷೆ ನಡೆಯುವ ಸಮಯದಲ್ಲಿ ಅಭ್ಯರ್ಥಿಗಳು ಮಾತನಾಡುವುದಾಗಲಿ ಅಥವಾ ಯಾವುದೇ ರೀತಿ ಸಂಪರ್ಕಿಸುವುದನ್ನಾಗಲಿ ಮಾಡಬಾರದು.
7. ಪಠ್ಯಪುಸ್ತಕಗಳು, ಮಾರ್ಗದರ್ಶಿಕೆಗಳು (ಕೈಪಿಡಿಗಳು) ಟಿಪ್ಪಣಿಗಳು ಮುಂತಾದವುಗಳನ್ನು ಪರೀಕ್ಷಾ ಕೊಠಡಿಯ ಒಳಗೆ ತರುವಂತಿಲ್ಲ.
8. ಅಭ್ಯರ್ಥಿಯು "ಮಾದರಿ ರುಜು ಅಂಕಣ"ದಲ್ಲಿ ತನ್ನ ರುಜುವನ್ನು ಸಂಬಳ ಕೊಡುವ ಅಧಿಕಾರಿಯ/ಮೇಲಧಿಕಾರಿಯ ಸಮಕ್ಷಮದಲ್ಲಿ ಹಾಕಬೇಕು ಮತ್ತು ಅದನ್ನು ಸಂಬಂಧಪಟ್ಟ ಅಧಿಕಾರಿಯು ಸಹಿ ಮತ್ತು ಕಚೇರಿ ಮುದ್ರೆಯೊಂದಿಗೆ ದೃಢೀಕರಿಸಬೇಕು.
9. ಅಭ್ಯರ್ಥಿಗಳು ಪ್ರತಿ ಪತ್ರಿಕೆಯ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಯಾವುದಾದರೂ ಒಂದು ಭಾಷೆ (ಕನ್ನಡ ಅಥವಾ ಇಂಗ್ಲೀಷ್) ಯಲ್ಲಿ ಉತ್ತರಿಸಲು ಅನುಮತಿ ನೀಡಲಾಗಿದೆ. ಈ ನಿಯಮವನ್ನು ಉಲ್ಲಂಘಿಸಿ ಭಾಗಶ: ಕನ್ನಡ ಹಾಗೂ ಭಾಗಶ: ಇಂಗ್ಲೀಷ್ ಭಾಷೆಯಲ್ಲಿ ಉತ್ತರಿಸುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಆದಾಗ್ಯೂ ಎರಡು ಭಾಷೆಗಳಲ್ಲಿ ಉತ್ತರಿಸಿದ ಪಕ್ಷದಲ್ಲಿ ಒಂದು ಭಾಷೆಯ ಉತ್ತರವನ್ನು ಮಾತ್ರ ಪರಿಗಣಿಸಿ ಮೌಲ್ಯಮಾಪನ ಮಾಡಲಾಗುವುದು.
10. ಅಭ್ಯರ್ಥಿಗಳು ಮಾರ್ಜಿನ್ ಎಳೆಯಲು, ಉತ್ತರಗಳಿಗೆ ಕೆಳಗೆರೆ ಹಾಕಲು ಅಥವಾ ಪ್ರಶ್ನೆಗಳ ಸಂಖ್ಯೆ ಬರೆಯಲು ಅಥವಾ ಶೀರ್ಷಿಕೆಗಳು ಇತ್ಯಾದಿಗಳನ್ನು ಬರೆಯಲು ಬಣ್ಣದ ಇಂಕಿನ ಪೆನ್ನು / ಡಾಟ್‌ಪೆನ್ನು ಅಥವಾ ಮತ್ಯಾವುದೇ ಹೆಚ್ಚಿನ ರೀತಿಯಲ್ಲಿ ಗುರುತು ಮಾಡುವ ಪೆನ್ನುಗಳನ್ನು ಬಳಸಕೂಡದು. ಎಲ್ಲಾ ಉತ್ತರಗಳನ್ನು ನೀಲಿ / ಕಪ್ಪು

ಇಂಕ್ ಪೆನ್ನು ಅಥವಾ ಆ ಬಣ್ಣದ ರೀಫಿಲ್ ಇರುವ ಡಾಟ್ ಪೆನ್ನುಗಳಲ್ಲಿ ಉತ್ತರಿಸಬೇಕು. ಉತ್ತರ ಬರೆಯುವ ವೇಳೆಯಲ್ಲಿ ಯಾವುದೇ ಕಾರಣದಿಂದ ಸ್ವಲ್ಪ ಬೇರೆಯ ಬಣ್ಣದ ಇಂಕಿನ ಪೆನ್ನು ಬದಲಾಯಿಸಿದಾಗ ಅದನ್ನು ಪರಿವೀಕ್ಷಕರ ಗಮನಕ್ಕೆ ತಂದು, ಅವರಿಂದ ಅನುಪ್ರಮಾಣ ಮಾಡಿಸಬೇಕು.

11. ಉತ್ತರಪತ್ರಿಕೆಯ ಎಡಭಾಗದ ಮಾರ್ಜಿನ್‌ನಲ್ಲಿ ಪ್ರಶ್ನೆಪತ್ರಿಕೆಯಲ್ಲಿರುವ ರೀತಿಯಲ್ಲೇ ಪ್ರಶ್ನೆಗಳ ಸಂಖ್ಯೆಯನ್ನು ನಮೂದಿಸಿ, ಸಂಬಂಧಿಸಿದ ಉತ್ತರಗಳನ್ನು ಬರೆಯತಕ್ಕದ್ದು.

12. ಯಾವುದೇ ಉತ್ತರಪತ್ರಿಕೆಯಲ್ಲಿ ಪ್ರಶ್ನೆಯ ಸಂಖ್ಯೆ ಮತ್ತು ಅದಕ್ಕೆ ಸಂಬಂಧಿಸಿದ ಉತ್ತರ ಮಾತ್ರ ಇರತಕ್ಕದ್ದು ಮತ್ತು ಪುಟಗಳಿಗೆ ಪುಟ ಸಂಖ್ಯೆ ನಮೂದಿಸತಕ್ಕದ್ದು. ಸಾಮಾನ್ಯವಾಗಿ ಉತ್ತರಪತ್ರಿಕೆಯಲ್ಲಿ ಬರೆಯಬಾರದ ಅಲಂಕಾರದ ಬರವಣಿಗೆ, ಕಲಾತ್ಮಕ ಬರವಣಿಗೆ (ಅಭ್ಯರ್ಥಿಯ ಸಹಜ ಕೈಬರಹವನ್ನು ಹೊರತು ಪಡಿಸಿ), ಗುರುತು, ರೇಖೆಗಳು, ಹೊಡೆದು ಹಾಕಿದ ಗೆರೆ, ಇಂಕ್ ಗುರುತು ಸಹಿ ಅಥವಾ ಘೋಷಣೆಗಳನ್ನು ಅಭ್ಯರ್ಥಿಯು ತನ್ನ ಗುರುತನ್ನು ಬಹಿರಂಗಗೊಳಿಸಲು ನಡೆಸಿದ ಪ್ರಯತ್ನ ಎಂದು ಪರಿಗಣಿಸಲಾಗುತ್ತದೆ. ಇಂತಹ ಪ್ರಕರಣಗಳಲ್ಲಿ ಅಭ್ಯರ್ಥಿಯಿಂದ ಯಾವುದೇ ವಿವರಣೆಯನ್ನು ಕೇಳದೆ ದಂಡ ಪ್ರಕ್ರಿಯೆ ಕೈಗೊಳ್ಳಲಾಗುವುದು. ಇಲಾಖಾ ಪರೀಕ್ಷಾ ಮಂಡಳಿಯ ತೀರ್ಮಾನವೇ ಅಂತಿಮವಾಗಿದ್ದು, ಯಾವುದೇ ರೀತಿಯ ಅಜ್ಞಾನ ಅಥವಾ ಅಜಾಗರೂಕತೆ ಅಥವಾ ಕಣ್ತಪ್ಪಿನ ಮನವಿಗಳನ್ನು ಪರಿಗಣಿಸುವುದಿಲ್ಲ. **ಆದ್ದರಿಂದ ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯಲ್ಲಿ ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಉತ್ತರ ಪತ್ರಿಕೆಯಲ್ಲಿ ನೀಡಿರುವ ಸೂಚನೆಗಳನ್ನು ತಪ್ಪದೆ ಗಮನಿಸಿ, ಪಾಲಿಸತಕ್ಕದ್ದು ಮತ್ತು ಪರಿವೀಕ್ಷಕರು ಪರೀಕ್ಷಾ ಕೊಠಡಿಗಳಲ್ಲಿ ನೀಡುವ ಸೂಚನೆಗಳನ್ನು ಸಹ ಎಚ್ಚರಿಕೆಯಿಂದ ಪಾಲಿಸತಕ್ಕದ್ದು.**

13. ಮೊಬೈಲ್ ಫೋನ್‌ಗಳನ್ನು ಪರೀಕ್ಷಾ ಕೊಠಡಿಗೆ ತರುವುದನ್ನು ನಿಷೇಧಿಸಲಾಗಿದೆ.